ಮುಂಜಾವು

ವಾರಪತ್ರಿಕೆ.

ಸಂಪಾದಕ: ನಿರಿಮನೆ ನಾಗರಾಜ್

೧೦ನೇ ವರ್ಷ ೨೨ನೇ ಸಂಚಿಕೆ ಬೆಲೆ ೬೦ ಪೈಸೆ

ಕೊಪ್ಪ ೩೦-೬-೧೯೯೧ ಭಾನುವಾರ ದೂರವಾಣಿ : ೧೧೪

ಬದುಕು ಬಳಗದ ಖಂಡನೆ

ಕೊಪ್ಪ : ಕಿರಿಯ ಕಾಲೇಜಿನ ಇನ್ ಚಾರ್ಜ್ ಪ್ರಿನ್ಸಿಪಾಲ್ ಆಗಿದ್ದ ರಾಮಕೃಷ್ಣಯ್ಯ ಪಾಸು ಮಾಡಿಸಲು ವಿದ್ಯಾರ್ಥಿಗಳಿಂದ ಲಂಚ ಪಡೆದು, ಮುಗ್ಧ ವಿದ್ಯಾರ್ಥಿನಿಯರ ಮೇಲೆ ಎಸಗಿರುವರೆನ್ನಲಾದ ಲೈಂಗಿಕ ಅತ್ಯಾಚಾರವನ್ನು 'ಬದುಕು ಬಳಗ' ಉಗ್ರವಾಗಿ ಖಂಡಿಸಿದೆ.

ಇದನ್ನು ವಿಚಾರಿಸಲು ಹೋಗಿದ್ದ ಮಹಿಳೆಯರ ಬಗ್ಗೆ ಅಸಭ್ಯವಾಗಿ ವರ್ತಿಸಿರುವುದನ್ನೂ ತೀವ್ರವಾಗಿ ಖಂಡಿಸಿದ್ದು, ಆತನಿಗೆ ಕೂಡಲೇ ಶಿಕ್ಷೆಯಾಗಬೇಕೆಂದು ಒತ್ತಾಯಿಸಿ ಮಹಿಳೆಯರು ಮತ್ತು ಸಾರ್ವಜನಿಕರು ನಡೆಸುತ್ತಿರುವ ಹೋರಾಟಕ್ಕೆ ಬಳಗ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಪ್ರಿನ್ಸಿಪಾಲ್ ಗಿರಿ ಚ್ಯುತಿ ; ಅಗಸ್ಟಿನ್ ಕುದುರೆಗುಂಡಿಗೆ ರವಾನೆ ; ಕಡತಗಳ ವಶ

ರಾಮ'ಕೃಷ್ಣ'ನ ಲೀಲಾ'ಜಾಲ'ಗಳ ತನಿಖೆ ಆರಂಭ

ಕೊಪ್ಪ : ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಕಳೆದ ಒಂದು ವರ್ಷದಿಂದ ಪ್ರಿನ್ಸಿಪಾಲ್ ಹುದ್ದೆ ನಿರ್ವಹಿಸುತ್ತಿದ್ದ ತರ್ಕಶಾಸ್ತ್ರ ಉಪನ್ಯಾಸಕ ಟಿ. ಪಿ. ರಾಮಕೃಷ್ಣಯ್ಯ ಅವರನ್ನು ಆ ಹುದ್ದೆಯಿಂದ ಕೆಳಗಿಳಿಸಿ, ಇಂಗ್ಲಿಷ್ ಉಪನ್ಯಾಸಕರಾದ ಎ. ಜಿ. ಸುಬ್ರಮಣ್ಯರಿಗೆ ವಹಿಸಲಾಗಿದೆ.

ರಾಮಕೃಷ್ಣಯ್ಯ-ಪ್ರಿನ್ಸಿಪಾಲ್ ಹುದ್ದೆಯಲ್ಲಿ ಎಸಗಿದ ಅನಾಚಾರ ಮತ್ತು ಭ್ರಷ್ಟಾಚಾರಗಳಲ್ಲಿ ಅವರ ಬಲಗೈ ಬಂಟನಾಗಿದ್ದ ನಾಲ್ಕನೇ ದರ್ಜೆ ನೌಕರ ಅಗಸ್ಟಿನ್‌ರನ್ನು ಕುದುರೆಗುಂಡಿಗೆ ತಾತ್ಕಾಲಿಕವಾಗಿ ವರ್ಗಾಯಿಸಲಾಗಿದೆ.

ರಾಮಕೃಷ್ಣಯ್ಯನ ಹಗರಣಗಳ ತನಿಖೆಗಾಗಿ ಡಿ.ಡಿ.ಪಿ.ಐ. ಪರವಾಗಿ ಜೂನ್ ೨೮ರಂದು ದಿಢೀರ್ ಆಗಮಿಸಿದ್ದ ಶಿಕ್ಷಣಾಧಿಕಾರಿ ಎಚ್. ಎನ್. ರಾಮಕೃಷ್ಣ ಮತ್ತು ವಿಷಯ ಪರಿವೀಕ್ಷಕ ಜಿ. ಚಂದ್ರಶೇಖರಪ್ಪ ಅವರುಗಳು ಈ ಕ್ರಮ ಕೈಗೊಂಡಿದ್ದು, ವಿದ್ಯಾರ್ಥಿಗಳ ಪರೀಕ್ಷಾ ರಿಜಿಸ್ಟರ್‌ಗಳು ಮುಂತಾದ ಎಲ್ಲ ಅಗತ್ಯ ದಾಖಲಾತಿಗಳನ್ನೂ ವಶಕ್ಕೆ ತೆಗೆದುಕೊಂಡಿದ್ದಾರೆ.

ಇವರುಗಳ ಪ್ರಾರಂಭಿಕ ತನಿಖೆಯ ವರದಿಯನ್ನಾಧರಿಸಿ ಜಿಲ್ಲಾ ಪರಿಷತ್ತು ಮುಂದಿನ ಕ್ರಮವನ್ನು ನಿರ್ಣಯಿಸುವುದೆಂದು ತಿಳಿದು ಬಂದಿದೆ.

ನಾಗರಿಕರ ದಂಡು

ಅಧಿಕಾರಿಗಳು ತನಿಖೆಗೆ ಬಂದಿರುವ ವಿಚಾರ ತಿಳಿಯುತ್ತಿದ್ದಂತೆಯೇ ಹಲವಾರು ನಾಗರಿಕರು ಕಾಲೇಜಿಗೆ ಧಾವಿಸಿ ತಮ್ಮ ತಮ್ಮ ಅಹವಾಲುಗಳನ್ನು ಹೇಳತೊಡಗಿದರು. ಆದರೆ ಕಡತಗಳ ಪರಿಶೀಲನೆ ಹಾಗೂ ಅಧ್ಯಾಪಕ ಮತ್ತು ಸಿಬ್ಬಂದಿ ವರ್ಗದವರ ಹಾಗೂ ವಿದ್ಯಾರ್ಥಿಗಳ ಹೇಳಿಕೆ ತೆಗೆದುಕೊಳ್ಳುತ್ತಿದ್ದ ಅಧಿಕಾರಿಗಳು ಮಧ್ಯಾಹ್ನ ೩ ಗಂಟೆಗೆ ನಾಗರಿಕರನ್ನು ಭೇಟಿ ಮಾಡಿದರು.

'ಜಾಗೃತಿ', ಮಾತೃಮಂಡಳಿ, ವಿದ್ಯಾ ಮಹಿಳಾ ಸಮಾಜ, ಸಾರ್ವಜನಿಕ ಹಿತರಕ್ಷಣಾ ಹೋರಾಟ ಸಮಿತಿ ಇವುಗಳ ಪದಾಧಿಕಾರಿಗಳು ಮತ್ತು ಸದಸ್ಯರಲ್ಲದೆ ಅನೇಕ ಮಂದಿ ಸಾರ್ವಜನಿಕರೂ ಚರ್ಚೆಯಲ್ಲಿ ಭಾಗವಹಿಸಿದ್ದರು. 'ಮುಂಜಾವು' ಕೂಡ ಪಾಲ್ಗೊಂಡಿತು.

ರಾಮಕೃಷ್ಣಯ್ಯನನ್ನು ಕೂಡಲೇ ಅಮಾನತು ಪಡಿಸಿ ಅನಂತರವೇ ತನಿಖೆ ನಡೆಸಬೇಕು ; ಇಲ್ಲದಿದ್ದರೆ ಅವರು ಸಾಕ್ಷ್ಯಾಧಾರಗಳನ್ನು ಮುಚ್ಚಿ ಹಾಕುತ್ತಾರೆ ಹಾಗೂ ಸಾಕ್ಷಿಗಳನ್ನು ಬೆದರಿಸಿ ಸಾಕ್ಷಿ ಸಿಗದಂತೆ ಮಾಡುತ್ತಾರೆ ಎಂಬುದು ಎಲ್ಲರ ಒಕ್ಕೊರಲಿನ ಒತ್ತಾಯವಾಗಿತ್ತು.

ಅಲ್ಲದೆ, ಅಧಿಕಾರಿಗಳು ಬಂದ ಕೂಡಲೇ ರಾಮಕೃಷ್ಣಯ್ಯ ಅಗಸ್ಟಿನ್ ಕೈಲಿ ತನ್ನ ಮನೆಗೆ ಕಳಿಸಿದ್ದ ಕಡತಗಳ ಒಂದು ಕಟ್ಟನ್ನೂ ಕೂಡಲೇ ವಶಕ್ಕೆ ತೆಗೆದುಕೊಳ್ಳಬೇಕು ಹಾಗೂ ಈ ಹಗರಣಗಳ ಮುಖ್ಯ ಸೂತ್ರಧಾರನಂತಿರುವ ಅಧ್ಯಾಪಕ 'ಜಿ ಎಸ್ ವಿ' (ವೆಂಕಟೇಶಮೂರ್ತಿ) ಮೇಲೂ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದೂ ಒಕ್ಕೊರಲ ಒತ್ತಾಯ ಬಂದಿತು. ಜಿ.ಎಸ್.ವಿ ವಿರುದ್ಧ ಹಲವರು ಸ್ಥಳದಲ್ಲೇ ದೂರು ಬರೆದುಕೊಟ್ಟರು.

ರಾಮಕೃಷ್ಣಯ್ಯ ಅಥವಾ ಇನ್ಯಾರೇ ಆಪಾದಿತರನ್ನು ತಕ್ಷಣವೇ ಅಮಾನತುಗೊಳಿಸಲು ಆಗದೆಂದೂ, ಆದರೆ ಹುದ್ದೆಯಿಂದ ನಿವೃತ್ತಿ ಹಾಗೂ ಅಗಸ್ಟಿನ್‌ನ ಡೆಪ್ಯುಟೇಶನ್‌ನಿಂದಾಗಿ ಅವರು ತನಿಖೆಗೆ ಅಡ್ಡಿ ಮಾಡಲು ಅಥವಾ ಸಾಕ್ಷಿ-ಸಾಕ್ಷ್ಯಾಧಾರ ಕೆಡಿಸಲು ಸಾಧ್ಯವಾಗದೆಂದೂ, ಇಡೀ ವಿಚಾರದ ಬಗ್ಗೆ ಶೀಘ್ರವೇ ಉನ್ನತ ತನಿಖೆ ನಡೆದು ಶಿಕ್ಷೆ ಆಗಿಯೇ ತೀರುವುದೆಂದೂ ಅಧಿಕಾರಿಗಳು ಸಮಾಧಾನ ಪಡಿಸಿದರು. ಆದರೆ ಜಿ. ಎಸ್. ವಿ. ಮೇಲೆ ತಕ್ಷಣವೇ ಏನೂ ಕ್ರಮ ಕೈಗೊಳ್ಳಲಿಲ್ಲ.

ಯಾವುದೇ ಫೈಲನ್ನೂ ಮುಚ್ಚಿಡಲು ಸಾಧ್ಯವಿಲ್ಲ; ತನಿಖೆಯ ವೇಳೆ ಹಾಜರುಪಡಿಸಲೇಬೇಕಾಗುತ್ತದೆ. ತಿದ್ದುಪಡಿ ನಡೆದಿದ್ದರೂ ಪತ್ತೆಯಾಗದೆ ಇರುವುದಿಲ್ಲ ಎಂದೂ ಅವರು ಸಮಾಧಾನ ಹೇಳಿದರು.

ತಾಯಿ ಸತ್ತರು !

ಇತ್ತ ತನಿಖೆ ನಡೆಯುತ್ತಿರುವಾಗ ರಾಮಕೃಷ್ಣಯ್ಯನಿಗೆ ಎಲ್ಲಿಂದಲೋ ಒಂದು ಫೋನ್ ಕರೆ ಬಂದು, ಅವರ ತಾಯಿ ಸತ್ತರೆಂಬ "ಸುದ್ದಿ" ನೀಡಿತು. ಕೂಡಲೇ ಆತ ಊರಿಗೆ ಹೋದರು.

ಆದರೆ ಇದು ರಾಮಕೃಷ್ಣಯ್ಯನ ಶಾಮೀಲುದಾರರೇ ನಡೆಸಿದ ನಾಟಕವಿರಬೇಕೆಂದೂ, ಇನ್ನು ಇಲ್ಲಿದ್ದರೆ ಸಿಕ್ಕ ಸಿಕ್ಕವರೆಲ್ಲ ಥಳಿಸಿಯಾರೆಂಬ ಭಯದಲ್ಲಿ ಆತ ಕಂಬಿ ಕಿತ್ತಿರಬೇಕೆಂದೂ ದಟ್ಟವಾಗಿ ಗುಮಾನಿ ಹರಡಿದೆ. ನಿಜ ಸಂಗತಿ ಗೊತ್ತಾಗಿಲ್ಲ.

ಒಟ್ಟಾರೆ, ಇಲಾಖೆ ಕ್ರಮ ಆರಂಭಿಸಿರುವುದು ಸಾರ್ವಜನಿಕರಲ್ಲಿ ತಕ್ಕಮಟ್ಟಿನ ಸಮಾಧಾನ ಮೂಡಿಸಿದೆ. ಆದರೆ ಕುಖ್ಯಾತ ಜಿಎಸ್‌ವಿಗೆ ಜೀವದಾನ ನೀಡಿರುವ ಬಗ್ಗೆ ಮಾತ್ರ ಎಲ್ಲೆಡೆ ಅತೃಪ್ತಿ ಕಂಡು ಬರುತ್ತಿದೆ.

ಶಾಸಕರೇನು ಮಾಡುತ್ತಿದ್ದಾರೆ ?

ಊರು ಇಷ್ಟೊಂದು ಪ್ರಕ್ಷುಬ್ಧವಾಗಿದ್ದರೂ ಇಡೀ ಹಗರಣದ ಬಗ್ಗೆ ಶಾಸಕ ಶಾಮಣ್ಣ ಅವರು ಸಾರ್ವಜನಿಕವಾಗಿ 'ಚಕಾರ'ವೆತ್ತದಿರುವುದು ಹಾಗೂ ಯಾವುದೇ ರೀತಿಯ ಗಂಭೀರ ತನಿಖೆಗೆ ಏರ್ಪಾಡು ಮಾಡದೇ ಇರುವುದು ಸಾರ್ವಜನಿಕರಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಅದರಲ್ಲೂ, ರಾಮಕೃಷ್ಣಯ್ಯ ತನ್ನ ವರ್ಗಾವಣೆಗಾಗಿ ಶಾಸಕರಿಂದ ಶಿಫಾರ್ಸು ಪತ್ರ ಪಡೆದುಕೊಂಡು ಹೋಗಿದ್ದಾರೆನ್ನುವ ಸುದ್ದಿ ಸಾರ್ವಜನಿಕರನ್ನು, ಮುಖ್ಯವಾಗಿ ಮಹಿಳಾ ಸಂಘಟನೆಗಳವರನ್ನು ತೀವ್ರವಾಗಿ ಕೆರಳಿಸಿದೆ.

ಆತನ ಬಗ್ಗೆ ತನಿಖೆ ನಡೆಸಿ, ಆತನ ಅನಾಚಾರಗಳಿಗೆ ಉಗ್ರ ಶಿಕ್ಷೆ ವಿಧಿಸದೆ ಕೇವಲ ವರ್ಗಾವಣೆ ಮಾಡಿದರೆ ಆತನ 'ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತೆ' ಆಗುತ್ತದೆ; ಆತ ಇನ್ನೊಂದು ಕಡೆ ನಿರಾಂತಕವಾಗಿ ತನ್ನ ಅನಾಚಾರಗಳನ್ನು ಮುಂದುವರಿಸುತ್ತಾರೆ. ಇದಾಗಕೂಡದು. ಆತ ಇಲ್ಲೇ ಕೇವಲ ಉಪನ್ಯಾಸಕರಾಗಿ ಮುಂದುವರಿದು, ತನಿಖೆ ಎದುರಿಸಬೇಕು. ಇಲ್ಲಿಂದ ಹೋಗುವುದೇ ಆದಲ್ಲಿ ಅಮಾನತಿನ ಮೇಲೆ ಮಾತ್ರ ಹೋಗಬೇಕು ಎಂದು ಮಹಿಳೆಯರು ಮತ್ತು ಸಾರ್ವಜನಿಕರು ಒಕ್ಕೊರಲಿನಿಂದ ಒತ್ತಾಯಿಸುತ್ತಿದ್ದಾರೆ.

ಯಾವುದೇ ಪ್ರಮುಖ ವಿಚಾರದಲ್ಲೂ ಸಮರ್ಥ ತನಿಖೆ ಮಾಡಿಸಬಲ್ಲ ದಾರ್ಷ್ಟ್ಯವನ್ನು ಈವರೆಗೂ ತೋರದಿರುವ ಶಾಸಕರು, ದಿನಬೆಳಗಾದರೆ ತನ್ನ 'ಕೈ'ಕಾಲು ಬುಡದಲ್ಲೇ ಸುಳಿದಾಡಿಕೊಂಡಿದ್ದ ಈ ರಾಮ'ಕೃಷ್ಣ'ನ ಬಗ್ಗೆ ಏನು ಮಾಡುತ್ತಾರೋ, ಕಾದು ನೋಡಬೇಕು.

ವಿಚಿತ್ರ ಮಹಿಳೆಯರಿಂದ ಕಾಮಕೃಷ್ಣಯ್ಯನಿಗೆ ಕಪಾಳ ಮೋಕ್ಷ !!

ಕೊಪ್ಪ : ಪಾಸು ಮಾಡಿಸುವುದಕ್ಕಾಗಿ ಮುಗ್ಧ ವಿದ್ಯಾರ್ಥಿನಿಯರನ್ನು ತನ್ನ ಕಾಮ ತೃಷೆ ಹಿಂಗಿಸಿಕೊಳ್ಳಲು ಬಳಸಿಕೊಂಡನೆನ್ನಲಾಗಿರುವ "ಕಾಮಕೃಷ್ಣ" ಖ್ಯಾತಿಯ ರಾಮಕೃಷ್ಣಯ್ಯನಿಗೆ ಕೊಪ್ಪದ ವಿಚಿತ್ರ ಮಹಿಳೆಯರು 'ಕಪಾಳ ಮೋಕ್ಷ' ಮಾಡಿದ್ದಾರೆ.

ಆತನಿಂದ ಅತ್ಯಾಚಾರಕ್ಕೆ ಬಲಿಯಾದ ವಿದ್ಯಾರ್ಥಿನಿಯೊಬ್ಬಳು ತನ್ನ ನೋವನ್ನು ನುಂಗಿಕೊಂಡಿರಲಾರದೆ, ಇನ್ನು ಮುಂದಾದರೂ ಬೇರೆ ಹೆಣ್ಮಕ್ಕಳಿಗೆ ಹೀಗಾಗದಿರಲೆಂಬ ಆಸೆಯಿಂದ ಧೈರ್ಯವಹಿಸಿ, ಪ್ರಗತಿಪರ ಮಹಿಳಾ ಸಂಘಟನೆಯಾದ 'ಜಾಗೃತಿ'ಗೆ ದೂರು ನೀಡಿದ್ದಳು.

ಜಾಗೃತಿಯವರು ಮಾತೃಮಂಡಳಿ, ವಿದ್ಯಾ ಮಹಿಳಾ ಸಮಾಜ ಮುಂತಾದ ಇನ್ನಿತರ ಮಹಿಳಾ ಸಂಘಟನೆಗಳವರನ್ನು ಸೇರಿಸಿ, ಸುಮಾರು ೩೦ ಮಹಿಳೆಯರು ಒಟ್ಟಾಗಿ ಈ ದೂರಿನ ಬಗ್ಗೆ, ಪ್ರಿನ್ಸಿಪಾಲ್ ಕುರ್ಚಿ ನಿರ್ವಹಿಸುತ್ತಿದ್ದ ರಾಮಕೃಷ್ಣಯ್ಯನನ್ನು ಪ್ರಶ್ನಿಸಲು ಜೂನ್ ೨೪ರಂದು ಹೋದಾಗ ಆತ ಅವರೊಂದಿಗೂ ಅಸಭ್ಯವಾಗಿ ವರ್ತಿಸಿದ್ದಲ್ಲದೆ, ಅವರನ್ನು ಹೊರದಬ್ಬಲು ಯತ್ನಿಸಿದನೆನ್ನಲಾಗಿದೆ.

ಇದರಿಂದ ರೊಚ್ಚಿಗೆದ್ದ ಮಹಿಳೆಯರು ಛತ್ರಿ, ವ್ಯಾನಿಟಿಬ್ಯಾಗ್ ಮುಂತಾಗಿ ತಮ್ಮ ಕೈಗೆ ಸಿಕ್ಕಿದ್ದೆಲ್ಲವನ್ನೂ ಬಳಸಿ, ಮುಖ-ಮುಸುಡಿ ಎನ್ನದೆ ಚಚ್ಚಿದರೆನ್ನಲಾಗಿದೆ.

ಇನ್ನು ಮುಂದೆ ಹೆಣ್ಣು ಮಕ್ಕಳ ಬಗ್ಗೆ ಹೀಗೆಲ್ಲ ವರ್ತಿಸಿದರೆ ಅಥವಾ ದೂರು ಕೊಟ್ಟ ಹೆಣ್ಮಕ್ಕಳ ಮೇಲೆ ಸೇಡು ತೀರಿಸಲು ಯತ್ನಿಸಿದರೆ ಇನ್ನೂ ಚೆನ್ನಾಗಿ ಪಾಠ ಕಲಿಸುವ ಎಚ್ಚರಿಕೆಯನ್ನೂ ಆತನಿಗೆ ನೀಡಿದರೆಂದು ತಿಳಿದು ಬಂದಿದೆ.

ಕೈ ಕೈ ಮುಗಿದು ಮಹಿಳೆಯರನ್ನು ಕಳಿಸಿಕೊಟ್ಟ ಆತ, ಅನಂತರ ಪೋಲೀಸರಿಗೊಂದು ನಾಮಕಾವಾಸ್ತೆ, ಎನ್ನಬಹುದಾದ ದೂರು ನೀಡಿದರೂ ಅದರಲ್ಲಿ ತಾನು ತಪರಾಕಿ ತಟ್ಟಿಸಿಕೊಂಡದ್ದನ್ನು ನಮೂದಿಸಿಲ್ಲ ಎಂದು ತಿಳಿದುಬಂದಿದೆ.

ತಾಯಿ-ಮಗುವಿನ ಪುನರ್ಮಿಲನಕ್ಕೆ 'ಜಾಗೃತಿ'ಯ ಸ್ಪಂದನ

ನಾಲ್ಕು ವರ್ಷದ ಹಿಂದೆ 'ಫಾತಿಮಾ' ಮತ್ತು 'ಕೋಯಾ'ರ ಪರಸ್ಪರ ಮೆಚ್ಚುಗೆ ಇದ್ದಿದ್ದರಿಂದ ಮುಸ್ಲಿಂ ಧರ್ಮದ ಅನ್ವಯ ಅವರೀರ್ವರ ಮದುವೆಯಾಗಿತ್ತು. ಆದರೆ ಅತ್ತೆ 'ಖತೀಜಾ'ಳಿಗೆ ಸೊಸೆ ತರಬಹುದೆಂದು ನಿರೀಕ್ಷಿಸಿದ್ದ ದುಡ್ಡು, ಬಂಗಾರ ಸಿಗದೆ ನಿರಾಸೆಯಾಗಿತ್ತು. ಮದುವೆಯಾದಂದಿನಿಂದ ವರದಕ್ಷಿಣೆ ತಾರದ ಸೊಸೆಯ ಬಗ್ಗೆ ಹಂಗಿಸುತ್ತಾ, ಕೂತರೂ ನಿಂತರೂ ತಪ್ಪೆನ್ನುವಂತೆ ಮಾಡುವುದು, ವಿನಾಕಾರಣ ಹೊಡೆಯುವುದು, ದುಡಿದು ಸುಸ್ತಾಗಿ ಬಂದ ಮಗನಿಗೆ ಚಾಡಿ ಹೇಳಿ ಸೊಸೆಗೆ ಹೊಡೆಸುವುದು ನಡೆದೇ ಇತ್ತು. ಸಾಮಾನ್ಯ ಭಾರತೀಯ ನಾರಿಯಂತೆ ಪತಿಯೇ ಪರದೈವವೆಂದು ತಿಳಿದು ಫಾತಿಮಾ ಎಲ್ಲವನ್ನೂ ಸಹಿಸುತ್ತಲೇ ಬಂದಳು. ಅವಳ ಈ ತಾಳ್ಮೆಯೂ ಅತ್ತೆಗೆ ಸಹಿಸದಾಯ್ತು. ದಕ್ಷಿಣ ಕನ್ನಡ ಜಿಲ್ಲೆಯಿಂದ ಹೆಚ್ಚು ವರದಕ್ಷಿಣೆ ತಂದು ಮಗನಿಗೆ ಇನ್ನೊಂದು ಮದುವೆ ಮಾಡಬೇಕೆಂಬ ದುರಾಸೆ ಬೆಳೆಯುತ್ತಾ ಹೋಯಿತು. ಇದರೊಂದಿಗೇ ಸೊಸೆಯ ಮೇಲಿನ ದೌರ್ಜನ್ಯವೂ ಅತಿರೇಕಕ್ಕೆ ಹೋಯಿತು. ಈ ದೈಹಿಕ ಮತ್ತು ಮಾನಸಿಕ ಹಿಂಸೆಗಳಿಂದ ಫಾತಿಮಾ ತನ್ನ ಎರಡನೇ ಮಗುವನ್ನು ಕಳೆದುಕೊಳ್ಳಬೇಕಾಯ್ತು ಆಗಲೂ ಅತ್ತೆಗೆ ಸೊಸೆಯ ಬಗ್ಗೆ ಮರುಕ ಮೂಡದೇ, ಹಸಿ ಬಾಣಂತಿಯ ಕೈಯಿಂದಲೇ ಮಗುವನ್ನು ಮಣ್ಣು ಮಾಡಿಸಿದಳು!

ಫಾತಿಮಾ ಮೂರನೇ ಬಾರಿ ಬಸುರಿಯಾದಾಗ, ಇದೇ ನೆಪದಲ್ಲಿ ಮೊದಲಿನ ಎರಡೂವರೆ ವರ್ಷದ ಮಗುವನ್ನು ತಾಯಿಯಿಂದ ಕಸಿದುಕೊಂಡು ಮನೆಯಿಂದ ಮಗುವಿನಿಂದ, ಮಗನಿಂದ ಸೊಸೆಯನ್ನು ದೂರ ಮಾಡುವುದರಲ್ಲಿ ಅತ್ತೆ ಸಫಲಳಾದಳು. ಈ ವಿಚಾರ 'ಜಾಗೃತಿ' ಮಹಿಳಾ ಸಂಘಟನೆಗೆ ತಿಳಿದಾಗ, ಅತ್ತೆಯೂ ಒಂದು ಹೆಣ್ಣು; ಸೊಸೆಯ ಮೇಲೆ ಮರುಕ ಮೂಡಿ ಇಂದಲ್ಲ ನಾಳೆ ಬದಲಾಗಬಹುದು ಎಂದುಕೊಂಡು ಯಾವ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ. ಆದರೆ ಖತೀಜಾ ಬದಲಾಗಲಿಲ್ಲ, ಮಸೀದಿ ಮತ್ತು ಪೋಲೀಸ್ ಠಾಣೆಗೂ ಈ ವಿವಾದ ಹೋಗಿ ತಾಯಿಯ ಬಳಿಯೇ ಮಗುವನ್ನು ಬಿಡಬೇಕೆಂದು ಅಲ್ಲಿಯೂ ತೀರ್ಮಾನವಾಯಿತು. ಆದರೆ ಅತ್ತೆ ಖತೀಜಾ ಕಾನೂನನ್ನೂ, ಜನಾಂಗದ ಮುಖಂಡರ ಸಾಮೂಹಿಕ ತೀರ್ಮಾನವನ್ನೂ ಧಿಕ್ಕರಿಸಿ ೯ ತಿಂಗಳು ಹೊತ್ತು-ಹೆತ್ತು ಸಾಕಿದ ತಾಯಿಯಿಂದ ಮಗುವನ್ನು ಸಂಪೂರ್ಣವಾಗಿ ದೂರ ಮಾಡಿದಳು.

ಕಳೆದ ಜೂನ್ ೯ ರಂದು ನ. ರಾ. ಪುರದಲ್ಲಿ ತನ್ನ ಮಾಸಿಕ ಸಭೆ ಸೇರಿದ್ದ 'ಜಾಗೃತಿ' ತಂಡವು ನ್ಯಾಯವಾದಿ ಶಶಿಕಲಾ ಉರಣ್ಕರ್‌ರವರ ನೇತೃತ್ವದಲ್ಲಿ ನ.ರಾ.ಪುರ ಮಂಡಲ ಸದಸ್ಯೆಯರು, ತಾಲ್ಲೂಕು ಮಹಿಳಾ ಒಕ್ಕೂಟ ಮತ್ತು ನ ರಾ ಪುರ ಮಹಿಳಾ ಮಂಡಳಿಯ ಸಂಪೂರ್ಣ ಸಹಕಾರದೊಂದಿಗೆ ಅತ್ತೆ ಖತೀಜಾಳ ಮನೆಗೆ ಹೋಗಿ ಮೃದು ಭಾಷೆಯಲ್ಲಿ ತಾಯಿ ಫಾತಿಮಾಳಿಗೆ ಮಗುವನ್ನು ಹಿಂತಿರುಗಿಸುವಂತೆ ಕೇಳಿತು. ಅದಕ್ಕೊಪ್ಪದೆ ಸೊಸೆಯ ಮೇಲೆ ಆಕ್ರಮಣ ಮಾಡ ಹೊರಟ ಅತ್ತೆಯಿಂದ ಮಗುವನ್ನು ಕರೆದುಕೊಂಡು, ತಾಯಿ ಮಡಿಲಿಗೆ ಇತ್ತಾಗ ತಾಯಿಯ ಕಣ್ಣಲ್ಲಿ ಮೂಡಿದ ಆನಂದ ಮತ್ತು ಮಗುವಿನ ಮುಖದಲ್ಲಿನ ಸಂತೋಷ ವರ್ಣಿಸಲು ಈ ಲೇಖನಿಯಿಂದ ಸಾಧ್ಯವಿದೆಯೆ! ಮಗುವಿನೊಂದಿಗೆ ಫಾತಿಮಾಳಿಗೆ ಛಲದಿಂದ ಬದುಕುವ ಸ್ಥೈರ್ಯವು ಬರಲೆಂದು ಹಾರೈಸೋಣ.

ವರದಿ : 'ಮೈತ್ರಿ', ಕೊಪ್ಪ.
'ಜಾಗೃತಿ'
ಕೇರಾಫ್ ಹೇಮಲತಾ ಟಿ. ಕೆ.
ಇಂಡಿಯನ್ ಬ್ಯಾಂಕ್ ಎದುರು, ಕೊಪ್ಪ.

ಕೊಪ್ಪ, ಎನ್ ಆರ್. ಪುರ, ಶೃಂಗೇರಿಯ ಮಹಿಳೆಯರು ಸೇರಿ 'ಜಾಗೃತಿ' ಎನ್ನುವ ಸಂಘಟನೆಯನ್ನು ರಚಿಸಿಕೊಂಡಿದ್ದಾರೆ. ಸಂಘಟನೆಯ ಮೂಲ ಉದ್ದೇಶ ಮಹಿಳೆಯರಲ್ಲಿ ವೈಚಾರಿಕ ತಿಳುವಳಿಕೆಯನ್ನು ಬೆಳೆಸುವುದರೊಂದಿಗೆ ಮಹಿಳೆಯರ ದಿನನಿತ್ಯದ ಸಮಸ್ಯೆಗಳನ್ನು ಚರ್ಚಿಸಿ ಸಾಧ್ಯವಾದಷ್ಟೂ ಅವುಗಳನ್ನು ಪರಿಹರಿಸಲು ಪರಸ್ಪರ ಸಹಕರಿಸುವುದು

ಈ ಸಂಘಟನೆ ಮಹಿಳೆಯರ ಬಗ್ಗೆ ನೈಜ ಕಳಕಳಿಯುಳ್ಳ ಮಹಿಳೆಯರ ಸ್ವಂತ ಪ್ರಯತ್ನ. ತಿಂಗಳಿಗೊಮ್ಮೆ ಸದಸ್ಯರ ಪೈಕಿಯೇ ಯಾರಾದರೊಬ್ಬರ ಊರಲ್ಲಿ ಸಭೆ ಸೇರಿ ಮೊದಲೇ ನಿಗದಿಪಡಿಸಿದ ವಿಷಯದ ಬಗ್ಗೆ ಚರ್ಚೆ ನಡೆಸಿ ತಾವು ಬೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ.

'ಜಾಗೃತಿ'ಯ ಮುಂದಿನ ಸಭೆ ಹೊಸಕೊಪ್ಪದ ಮಹಿಳಾ ಸಮಾಜದಲ್ಲಿ ೭-೭-೯೧ನೇ ಭಾನುವಾರ ಬೆಳಗ್ಗೆ ೧೧ ಗಂಟೆಗೆ ನಡೆಯುತ್ತದೆ.

ಪದ್ಯದಂಗಳ

ಏಕಾಂತದ ನೋಟ

ತೊರೆಯ ಬಳಿಯೇ ಇಣುಕಿ ನಿಂತು
ವಿಪುಲ ಬಾನ ಅರಿವು
ಅಯಿತೆನ್ನ ಮನದಲಿಂತು
ಶುಭ್ರ ನೀಲಿ ಹರವು.

ಬೆಳ್ಳಿಮೋಡ ತಂದಿತೆನ್ನ ಹಚ್ಚ ಹಸಿರ
ಕನಸನೆ ಮೆಲುಕುತ
ಗಾವುದ ಗಾವುದ ದೂರ ಸರಿದವೀ
ಭಾವ ಮಿಣುಕು ನೋಡ ಚಲಿಸುತ.

ನಡೆದೆ ನಾನು ದಿಗಂತದಾಚೆಗೆ
ಸುತ್ತಿ ಸುಳಿವ ತೊರೆಯ ದಾಟಿ
ಹೆಜ್ಜೆ ಹೆಜ್ಜೆಗೂ ಕಲರವ ನಾದಕೆ
ನುಡಿಸುತಿತ್ತು ನನ್ನೆದೆ ತಂತಿ ಮೀಟಿ

ಮರೆಯಾಯಿತು ಈ ಜಗದ ಕಹಿ ನೋವು
ಜೊತೆಯಾಯಿತು ಈ ರಸಕ್ಷಣ ರೋಮಾಂಚನ
ನವಬಾಲ್ಯವು ಮರುಕಳಿಸಿತು
ನೆಟ್ಟ ಹಾಕಿತೀ ಏಕಾಂತವ.

ಶರ್ಮಿಳಾ ಜಿ. ಕೆ. ರಾವ್,
ಗುಬ್ಬಗದ್ದೆ.

ವಿಶ್ವ ಮಾನವ ಭವನ ವಹಿಸಿಕೊಳ್ಳಲು ಕುವೆಂಪು ವಿವಿ ಸಿದ್ಧ: ಕುಲಪತಿ

ಚಿಕ್ಕಮಗಳೂರು : ಹಿರಿಕೊಡಿಗೆಯ 'ವಿಶ್ವಮಾನವ ಭವನ' ವನ್ನು ಕುವೆಂಪು ವಿಶ್ವವಿದ್ಯಾನಿಲಯವು ವಹಿಸಿಕೊಳ್ಳಲು ಸಿದ್ಧವಿದೆ ಎಂದು ಕುವೆಂಪು ವಿ. ವಿ. ಕುಲಪತಿ ಪ್ರೊ|| ಎಂ. ಆರ್. ಗಜೇಂದ್ರಗಢ ಇಲ್ಲಿ ತಿಳಿಸಿದ್ದಾರೆ.

ಇಲ್ಲಿ ಈಚೆಗೆ ನಡೆದ ವಿ. ವಿ. ಸಿಂಡಿಕೇಟ್ ಸಭೆಯ ನಂತರ ಪತ್ರಕರ್ತರೊಂದಿಗೆ ಮಾತಾಡುತ್ತಿದ್ದ ಅವರು, ಬೇಂದ್ರೆ, ಪು. ತಿ. ನ. ಮತ್ತು ಕುವೆಂಪು ಇವರುಗಳ ಜನ್ಮಸ್ಥಳಗಳ ಅಭಿವೃದ್ಧಿಗಾಗಿ ನೀಡಲು ಉದ್ದೇಶಿಸಿರುವ ೫೦ ಲಕ್ಷ ರೂ.ಗಳ ಪಾಲಿನಲ್ಲಿ ಜಿಲ್ಲಾ ಕೇಂದ್ರದಲ್ಲಿ ಒಂದು ಕುವೆಂಪು ಅಧ್ಯಯನ ಪೀಠವನ್ನು ಆರಂಭಿಸುವ ಬಗ್ಗೆಯೂ ಉತ್ಸುಕತೆ ವ್ಯಕ್ತಪಡಿಸಿದರು.

ವಿಶ್ವಮಾನವ ಭವನವನ್ನು ಒಂದು ಸಂಶೋಧನಾ ಕೇಂದ್ರವಾಗಿಸಬಹುದೆಂದೂ ಅವರು ಹೇಳಿದರು.

ಕಟ್ಟಡದ ಪ್ರಾಕಾರ ಶಿಥಿಲ

ಇತ್ತ ಹಿರಿಕೊಡಿಗೆಯಲ್ಲಿ, ವಿಶ್ವಮಾನವ ಭವನದ ಕಾಂಪೌಂಡ್ ಗೋಡೆಗಳು ಮಳೆಗಾಲದ ಮೊದಲ ಮಳೆಗೇ ಕುಸಿದು ಗೊಬ್ಬರದ ಗುಂಡಿಗೆ ಬಿದ್ದಿದ್ದು, ಭವನದ ಶಿಲಾಫಲಕಗಳೂ ಶಿಥಿಲವಾಗಿವೆಯೆಂದು ವರದಿಯಾಗಿದೆ.

ಭೂ ಸೇನಾ ನಿಗಮದವರು ನಿರ್ಮಿಸಿರುವ ಈ ಕಾಮಗಾರಿಯ ವೈಫಲ್ಯದ ಬಗ್ಗೆ ಎಲ್ಲೆಡೆ ಖಂಡನೆ ವ್ಯಕ್ತವಾಗಿದ್ದು, ಕೂಡಲೇ ದುರಸ್ತಿಯಾಗಬೇಕೆಂದೂ, ಸಂದೇಶಭವನ ಸೇರಿದಂತೆ ಕುವೆಂಪು ಜನ್ಮಸ್ಥಳದ ಎಲ್ಲ ವ್ಯವಹಾರವನ್ನೂ ಕುವೆಂಪು ವಿವಿಗೇ ವಹಿಸಬೇಕೆಂದೂ ಒತ್ತಾಯ ಪ್ರಕಟವಾಗುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು.

ಜಾನುವಾರು ಕಾಯಿಲೆಗಳ ಬಗ್ಗೆ ಮುನ್ನೆಚ್ಚರಿಕೆ ಮತ್ತು ಕೆಲವು ರೋಗ ನಿದಾನಗಳು

ಜಾತ್ರೆಯಲ್ಲಿ ಮತ್ತು ಹೊರಗಿನಿಂದ ಜಾನುವಾರುಗಳನ್ನು ಕ್ರಯಕ್ಕೆ ತರುವಾಗ ರೋಗದ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕು ಸಾಧಾರಣವಾಗಿ, ಕಾಲು-ಬಾಯಿ, ಚಪ್ಪೆರೋಗ, ಗಂಟಲು ಬರುಕಿ ರೋಗ, ಇಂತಹ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು, ಮಳೆಗಾಲ ಪ್ರಾರಂಭಕ್ಕೆ ಮುನ್ನ ಮತ್ತು ಚಳಿಗಾಲ ಪ್ರಾರಂಭಕ್ಕೆ ಮುನ್ನ ಇಂಜೆಕ್ಷನ್ ಮಾಡಿಸಬೇಕು. ಜಾನುವಾರುಗಳಿಗೆ ಬೇರೆ ಬೇರೆ ಕಡೆಯಿಂದ ಸಾಂಕ್ರಾಮಿಕ ರೋಗ ಬರುವ ಸಾಧ್ಯತೆ ಇರುವುದು. ಸ್ಥಳೀಯವಾಗಿ ಕೆಲವೊಂದು ಔಷಧಿಗಳನ್ನು ಮಾಡಿ ನಿವಾರಿಸಬಹುದು.

೧. **ಕೆಂಪು ಮೂತ್ರ :** ಎಮ್ಮೆ ಜಾನುವಾರು, ಕರುಗಳು ಕೆಂಪು ಮೂತ್ರ ಹೆಚ್ಚು ಮಾಡಿದಾಗ ನಾಚಿಕೆ ಮುಳ್ಳನ್ನು ಚೆನ್ನಾಗಿ ಬೇಯಿಸಿದ ನೀರನ್ನು ೩ ದಿವಸ ಕುಡಿಸಬೇಕು.

೨. ಗಾಯ : ಬೆಳ್ಳುಳ್ಳಿ, ಅರಸಿನ, ಕೊಬ್ಬರಿ ಎಣ್ಣೆಯ ಲೇಪವನ್ನು ಗಾಯಕ್ಕೆ ಸವರಬೇಕು.

೩. ಹುಳ : ಕರ್ಪೂರ, ಕೊಬ್ಬರಿ ಎಣ್ಣೆ, ಬಿಸಿಮಾಡಿ ಹಚ್ಚಬೇಕು.

೪. ಸಣ್ಣ ಕರುಗಳಿಗೆ **ಉಗುಣ ಜಿಕ್ಕಾಡ :** ಕರಿತುಳಸಿ, ಅಥವಾ ತುಳಸಿ ಸೊಪ್ಪು, ಕೊಬ್ಬರಿ ಎಣ್ಣೆಯ ಲೇಪನ ಮಾಡಬೇಕು.

ಕೊಟ್ಟಿಗೆ ಮನೆಗೆ ಹಸಿರು ಸೊಪ್ಪು, ಹುಲ್ಲುಗಳನ್ನು ಆರು ಅಡಿ ದೂರದಲ್ಲಿರುವಂತೆ ನೋಡಿಕೊಳ್ಳಬೇಕು.

ಖಾಯಿಲೆ ಬಂದ ಜಾನುವಾರುಗಳನ್ನು ಉಳಿಕೆ ಜಾನುವಾರುಗಳಿಂದ ದೂರವಿಡಬೇಕು. ಹಾಲನ್ನು ಕಾಯಿಸಿ ಕುಡಿಯುವುದು, ಪಾಶ್ಚರೀಕರಿಸುವುದು (ಹೆಚ್ಚು ಕಾಯಿಸಿ ತತ್‌ಕ್ಷಣ ತಣ್ಣಗೆ ಮಾಡುವುದು) ಉತ್ತಮ.

● ಮೃತ್ಯುಂಜಯ ನೀಚಡಿ

'ಸ್ನಾಕ್' ವತಿಯಿಂದ ಮುಂಗಾರು ಮಳೆಯಲ್ಲಿ ಕೊಡಚಾದ್ರಿ ಆರೋಹಣ, ಮರವಂತೆ ಚಾರಣ

ಶೃಂಗೇರಿ ನೇಚರ್ ಅಡ್ವೆಂಚರ್ ಕ್ಲಬ್ (ಸ್ನಾಕ್)ನ ವತಿಯಿಂದ ಜುಲೈ ತಿಂಗಳ ೨ರಿಂದ ೫ರವರೆಗೆ ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಗ್ರಾಮೀಣ ಯುವಕ-ಯುವತಿಯರಿಗಾಗಿ **ಮುಂಗಾರು ಮಳೆಯಲ್ಲಿ ಕೊಡಚಾದ್ರಿ ಆರೋಹಣ ಮತ್ತು ಮರವಂತೆ ಸಮುದ್ರ ತೀರದಲ್ಲಿ ಚಾರಣವನ್ನು** ಯೋಜಿಸಲಾಗಿದೆ.

ಇದರಲ್ಲಿ ಪಾಲ್ಗೊಳ್ಳಲು ಆಸಕ್ತಿ ಇರುವವರು ೬೫ ರೂ.ಗಳ ಮನಿ ಆರ್ಡರನ್ನು ಡಾ|| ಜಿ.ಕೆ. ಭಟ್, ಸ್ನಾಕ್ ಅಧ್ಯಕ್ಷರು, ಶೃಂಗೇರಿ ಇವರಿಗೆ ಕಳುಹಿಸಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ಈಗಾಗಲೇ ಸ್ನಾಕ್ ಸದಸ್ಯರಾಗಿರುವವರು ರೂ. ೬೦, ಪರಿಶಿಷ್ಟ ಜಾತಿ/ಪಂಗಡ ಹಾಗೂ ಬುಡಕಟ್ಟು ಜನಾಂಗದವರು ರೂ. ೩೫ ಮಾತ್ರ ಪಾವತಿಸಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು. ಹೆಸರನ್ನು ನೊಂದಾಯಿಸಿಕೊಳ್ಳಲು ಜುಲೈ ೧೦ನೇ ತಾರೀಕು ಕೊನೆಯ ದಿನವಾಗಿರುತ್ತೆ. ಈ ಶಿಬಿರವು ಬೆಂಗಳೂರು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ—ಇವರ ಸಹಕಾರದಿಂದ ನಡೆಯುವುದು.

ವೇದಿಕೆ

ಬೇಕು—ಇನ್ನೊಂದು 'ಸಂಗ್ರಾಮ'ವಲ್ಲ, ಚುನಾವಣೆ ಸಂಹಿತೆ ತಿದ್ದುಪಡಿ

ಪ್ರಿಯರೆ,

ದಿನಾಂಕ. ೯-೬-೧೯೯೧ರ ಸಂಚಿಕೆಯಲ್ಲಿ ಪ್ರಕಟವಾದ 'ಜನತೆಯ ಪ್ರಜಾಪ್ರಭುತ್ವ ಮತ್ತು ಚುನಾವಣೆಗಳು' ಲೇಖನ ಸಮಯೋಚಿತವಾಗಿತ್ತು. ಲೇಖನದ ಒಟ್ಟು ಸಾರಾಂಶದಲ್ಲಿ "ಪ್ರಸ್ತುತ ಸ್ಥಿತಿಯಲ್ಲಿ ಚುನಾವಣೆಯಿಂದ ಬಲಿಷ್ಠ ಪ್ರಜಾಪ್ರಭುತ್ವ ಅಸಾಧ್ಯ. ಇದಕ್ಕೆ ಪರಿಹಾರ ಇನ್ನೊಮ್ಮೆ 'ಸ್ವಾತಂತ್ರ್ಯ ಸಂಗ್ರಾಮ' ನಡೆಯಬೇಕು" ಎಂದು ಸೂಚಿಸಲ್ಪಟ್ಟಿದೆ. ಆದರೆ ಇದು ಸಾಧ್ಯವೆ?

ಅಂದು ಪರಕೀಯರಿಂದ ದೌರ್ಜನ್ಯ ನಡೆಯುತ್ತಿತ್ತು ; ಸಹಜವಾಗಿ ಜನ ಒಂದಾದರು ; ಫಲಿತಾಂಶವೂ ಒಳ್ಳೆಯದಾಯಿತು. ಆದರೆ ಇಂದು ಮನೆಯ ಒಳಗಡೆಯೇ ಜಗಳ ನಡೆಯುತ್ತಿದೆ, ದೂರುವುದು ಯಾರಿಗೆ? ಜಾತಿ, ಧರ್ಮಗಳಿಂದ ವಿಭಜನೆಯಾದ ಜನತೆಯನ್ನೂ, ಗುಂಪುಗಳನ್ನೂ ಒಂದಾಗಿಸಲು ಸಾಧ್ಯವೆ? ತನ್ನ ಧರ್ಮ ಮೇಲು, ಇನ್ನೊಂದು ಧರ್ಮ ಕೀಳು ಎನ್ನುವವರ ನಡುವೆ ಸಮಾನತೆ ತರುವುದು ಹೇಗೆ? ಒಬ್ಬ ಪರಿಸರ ಪ್ರೇಮಿ–ಇನ್ನೊಬ್ಬ ಪರಮಾಣು ವಿದ್ಯುತ್ ಅವಲಂಬಿ, ಇವರ ನಡುವೆ ಹೊಂದಾಣಿಕೆ ಹೇಗೆ ಸಾಧ್ಯ?

ಒಂದು ವೇಳೆ 'ಸಂಗ್ರಾಮ' ನಡೆದರೂ ಜನ ಒಂದಾಗಲು ಸಾಧ್ಯವೇ ಇಲ್ಲ. ಒಂದು ರೀತಿಯಲ್ಲಿ ಇದು ಒಡೆದ ಹಾಲು ! ಸಂಗ್ರಾಮಕ್ಕೆ ಅವಕಾಶ ಕೊಟ್ಟಲ್ಲಿ ಸ್ವಾತಂತ್ರ್ಯ ಸಿಗುವ ಬದಲು ಭಯೋತ್ಪಾದರು, ನಕ್ಸಲೀಯರಂತಹ ವಿಚ್ಛಿದ್ರಕಾರಿ ಶಕ್ತಿಗಳ ಪ್ರಾಬಲ್ಯ ಹೆಚ್ಚಬಹುದು ; ಬಲಿಷ್ಠ ಪ್ರಜಾಪ್ರಭುತ್ವ ಕನಸಾದೀತು !

ಇದರ ಬದಲಾಗಿ ಪ್ರಜಾಪ್ರಭುತ್ವ ನಿಯಮಾವಳಿ, ಚುನಾವಣಾ ರೀತಿಗಳಲ್ಲಿ ಏಕತೆಯನ್ನು ಬಿಂಬಿಸುವ ವ್ಯವಸ್ಥಿತ ತಿದ್ದುಪಡಿ ಮಾಡುವುದರಿಂದ ಬಲಿಷ್ಠ ಹಾಗೂ ಶಾಂತಿಯುತ ಪ್ರಜಾಪ್ರಭುತ್ವ ಸಾಧ್ಯವಾಗಬಹುದು. ತಿದ್ದುಪಡಿ ಹೇಗೆ?–ಕೆಲವು ಉದಾಹರಣೆಗಳು — * ಹೆಬ್ಬೆರಳು ಒತ್ತಲು ಬಾರದ ನಿರಕ್ಷರಕುಕ್ಷಿಗಳನ್ನು ರಾಜಕಾರಣಿಗಳನ್ನಾಗಿಸಿ, ಮನೆಮನೆಯಲ್ಲಿ ರಾಜಕೀಯದ ಬೀಜ ಬಿತ್ತುವ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ರದ್ದಾಗಬೇಕು * ಜಿಲ್ಲಾ ಪರಿಷತ್, ವಿಧಾನಸಭೆ, ಲೋಕಸಭೆಗಳಿಗೆ ಸ್ಪರ್ಧಿಸಲು ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸಬೇಕು. (ಐ.ಎ.ಎಸ್ ಅಧಿಕಾರಿಯೂ ಅವಿದ್ಯಾವಂತ 'ಮಂತ್ರಿ'ಯ ಗುಲಾಮನಾಗುವುದೆಂದರೆ ಎಂತಹ ವಿಪರ್ಯಾಸ !) * ಅಪರಾಧಿಗೆ ಪ್ರಜಾಪ್ರಭುತ್ವದಲ್ಲಿ ಸ್ಪರ್ಧಿಸಲು ಅವಕಾಶ ಇಲ್ಲದಿದ್ದರೂ ಜೈಲಿನಲ್ಲೇ ಇದ್ದು ಉಮೇದುವಾರನಾಗಬಹುದಾದ ನೀತಿಯನ್ನು ರದ್ದುಪಡಿಸಬೇಕು.

* ಒಬ್ಬನೇ ವ್ಯಕ್ತಿ ಎರಡಕ್ಕೂ ಹೆಚ್ಚು ಕಡೆ ಸ್ಪರ್ಧಿಸುವ ನಿಯಮವನ್ನು ಚುನಾವಣೆ ಸಂಹಿತೆಯಲ್ಲಿ ರದ್ದುಪಡಿಸಬೇಕು. ಎರಡೂ ಕಡೆ ಗೆದ್ದ ಅಭ್ಯರ್ಥಿ ಒಂದು ಕಡೆಗೆ ರಾಜೀನಾಮೆ ಕೊಟ್ಟಾಗ ಮರು ಚುನಾವಣೆಯ ಖರ್ಚು ಇದರಿಂದ ಸರ್ಕಾರಕ್ಕೆ ಉಳಿದಂತಾಗುತ್ತದೆ.

* ರಾಜಕಾರಣಿಗಳ, ಮುಖ್ಯವಾಗಿ ಶಾಸಕರ ಅಧಿಕಾರವನ್ನು ಸ್ವಲ್ಪ ಪ್ರಮಾಣದಲ್ಲಿ ಮೊಟಕುಗೊಳಿಸಬೇಕು. ಅವನ ತೀರ್ಮಾನವೇ ಅಂತಿಮ ತೀರ್ಮಾನವಾಗಬಾರದು. ಇದರಿಂದ ಭ್ರಷ್ಟಾಚಾರ ಕಮ್ಮಿಯಾಗಬಹುದು. ಇವು ಕೆಲವು ಉದಾಹರಣೆಗಳು ಮಾತ್ರ. ಇಂತಹ ನಿಯಮಗಳನ್ನು ಉತ್ತಮಪಡಿಸಿದಲ್ಲಿ ಪ್ರಜಾಪ್ರಭುತ್ವದ ವ್ಯಾಪ್ತಿಗೂ ಚ್ಯುತಿ ಬರುವುದಿಲ್ಲ. ಈಗಿರುವ ಸ್ಥಿತಿ ಈಗಾಗಲೇ ಹೇಳಿದಂತೆ 'ಒಡೆದ ಹಾಲು' ಪುನಃ ಹಾಲನ್ನಾಗಿಸುವುದು ಅಸಾಧ್ಯ, ಉತ್ತಮ ಪ್ರಯತ್ನದಿಂದ ಉತ್ತಮ ಮೊಸರನ್ನಾದರೂ ಮಾಡಬಹುದಲ್ಲವೆ ? ಐದು ವರ್ಷಗಳಿಗೊಮ್ಮೆ ಬರುತ್ತಿದ್ದ 'ಭಿಕ್ಷುಕ' ಪ್ರತಿವರ್ಷ ಬರುತ್ತಾನೆಂದರೆ 'ಕಡಿವಾಣ' ಹಾಕಲೇಬೇಕಲ್ಲವೆ?

ಐದು ವರ್ಷಗಳ ಆಡಳಿತ ನಡೆಸಲು ಸಾಧ್ಯವಾಗದಿದ್ದಲ್ಲಿ ಅವಧಿ ಮುಗಿಯುವವರೆಗೆ ಬಹುಮತದ ಪಕ್ಷವನ್ನು ವಿಸರ್ಜಿಸಿ 'ಮಿಲಿಟರಿ' ಸರ್ಕಾರವನ್ನು ಜಾರಿಗೊಳಿಸಬೇಕು. ಇದರಿಂದ ಬಡ ಮತದಾರ ಉಸಿರಾಡಬಹುದು.

ಇದೆಲ್ಲವುದರ ಜೊತೆಗೆ ಮತದಾರ ಸ್ವಂತ ವಿವೇಚನೆಯುಳ್ಳವನಾಗಬೇಕು. ತನ್ನ 'ಪವಿತ್ರ' 'ಮತ'ದ ಪಾವಿತ್ರ್ಯವೆಷ್ಟು ಎಂದು ಅವನು ಮನಗಾಣಬೇಕು. ಮತದಾನ ಬರೀ ಹಕ್ಕಲ್ಲ, ಕರ್ತವ್ಯ ಸಹ ಆಗಬೇಕು

ಪತ್ರಿಕೆಗಳಂತಹ ಮಾಧ್ಯಮಗಳೂ ಎಚ್ಚರಗೊಳ್ಳಬೇಕು. ಒಂದು ಪಕ್ಷಕ್ಕೆ ಒಲವು ತೋರಿಸುವ ಪತ್ರಿಕೆಯ ಓದುಗನೂ ಸಹ ಅವನಿಗರಿವಿಲ್ಲದೆ ಆ ಪಕ್ಷದ ಕಡೆಗೇ ವಾಲುವ ಸಾಧ್ಯತೆಗಳಿವೆ.

ತಮ್ಮ ಬೇಜವಾಬ್ದಾರಿಯಿಂದ ದೇಶವನ್ನು ಸ್ವಲ್ಪ ಸ್ವಲ್ಪವಾಗಿ ವಿಚ್ಛಿದ್ರಕಾರಿ ಶಕ್ತಿಗಳಿಗೆ ಮಾರುತ್ತಿರುವ ರಾಜಕಾರಣಿಗಳು ದೇಶದ ಭವಿಷ್ಯವನ್ನು ರೂಪಿಸುವಲ್ಲಿ ದಿಟ್ಟ ಹೆಜ್ಜೆಯಿಡಬೇಕು. ನಾಳೆ ನಿರುದ್ಯೋಗ ಬಡತನಗಳು ಭಯೋತ್ಪಾದನೆಗೆ ಪ್ರಚೋದನೆ ನೀಡಿದರೆ ಆಶ್ಚರ್ಯವಲ್ಲ. ಆದರೆ ಅದು ರಾಜಕಾರಣಿಗಳ ಅಜಾಗರೂಕತೆ, ದೇಶದ ಅನಿಷ್ಟ, ಪ್ರಜಾಪ್ರಭುತ್ವದ 'ಸಾವು'. ಹಾಗಾಗದಿರಲಿ ಎಂದು ಆಶಿಸೋಣ

—ಗ ರಾ. ಅರವಿಂದ ಸಿಗದಾಳ್.

ಎಲ್ಲ ಪಕ್ಷಗಳೂ ಪರಿಸರ ನಾಶದಲ್ಲಿ ಶಾಮೀಲಾಗಿವೆ ಏಕೆ ?

ಪ್ರಿಯರೆ,

೯-೬-೯೧ರ ಸಂಚಿಕೆಯಲ್ಲಿನ 'ಚುನಾವಣೆ' ಕುರಿತ ನಿಮ್ಮ ಲೇಖನದಲ್ಲಿ ದೇಶದ ಮುಖ್ಯ ಸಮಸ್ಯೆಗಳೆದುರು ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದೀರಿ ಅದೇ ರೀತಿ, ನಾನೊಬ್ಬ ಪರಿಸರ ಪ್ರೇಮಿಯಾಗಿ, ಪರಿಸರ ಸಂರಕ್ಷಣೆ ಅಥವಾ ನಾಶದ ವಿಷಯದಲ್ಲಿ ಈ ಎಲ್ಲಾ ಪಕ್ಷಗಳೂ ಹೇಗೆ ಒಂದೇ ರೀತಿ ವರ್ತಿಸುತ್ತಿವೆ ಎಂಬುದನ್ನಿಷ್ಟು ಓದುಗರ ಮುಂದೆ ಪರಿಶೀಲನೆಗೆ ಇಡುತ್ತೇನೆ.

ಚುನಾವಣೆ ಸಮಯದಲ್ಲಿ ಪ್ರತಿಯೊಂದು ಪಕ್ಷವೂ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಬಡ ಜನರ, ರೈತರ, ದೀನ ದಲಿತರ, ಕೃಷಿ ಕಾರ್ಮಿಕರ, ಅಲ್ಪಸಂಖ್ಯಾತರ—ಒಟ್ಟಾರೆ ಎಲ್ಲಾ ಜನ ವರ್ಗಗಳ ಏಳಿಗಾಗಿಯೇ ತಾವುಗಳೆಲ್ಲ ಹಗಲು–ರಾತ್ರಿ ಹೋರಾಡುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿವೆ. ಹಲವಾರು ದಶಕಗಳಿಂದ ಇಷ್ಟೆಲ್ಲಾ ಪ್ರಯತ್ನ ಪಟ್ಟರೂ ಅವರಲ್ಲಿ (ಪಕ್ಷದಲ್ಲಲ್ಲ, ಜನರಲ್ಲಿ) ಬಡತನದ ಬೇಗೆ ಹೆಚ್ಚಾಗುತ್ತಲೇ ಇದೆ ಎನ್ನುವ ಅಂಶ ಅಧ್ಯಯನದಿಂದ ಸ್ಪಷ್ಟಪಟ್ಟಿದೆ.

ಬಡತನ ಹೆಚ್ಚಾಗುವುದಕ್ಕೂ ಪರಿಸರ ನಾಶಕ್ಕೂ ಹತ್ತಿರದ ಸಂಬಂಧ ಇದೆ ಎಂಬುದು ರಾಜಕೀಯ ಪಕ್ಷಗಳಿಗೆ ಗೊತ್ತಿದ್ದರೂ ಏನೂ ಗೊತ್ತಿಲ್ಲದಂತೆಯೇ ನಟಿಸುತ್ತಿವೆ.

ನೈಸರ್ಗಿಕ ಲೂಟಿಯಲ್ಲಿ ಕಾಂಗ್ರೆ

ದಿವಂಗತ ರಾಜೀವ್ ಗಾಂಧಿಯವರು ಪ್ರಧಾನಿಯಾದ ಮೊದಲೆರಡು ವರ್ಷದಲ್ಲಿ ಪರಿಸರ ರಕ್ಷಣೆಯ ಬಗ್ಗೆ ಬಹಳ ಆಸಕ್ತಿ ವಹಿಸಿ ಪ್ರಮುಖ ನೀತಿ ನಿರ್ಣಯವನ್ನು ಘೋಷಿಸಿದ್ದರು. ಗಂಗಾ ನದಿಯ ಶುದ್ಧೀಕರಣ, ಬಂಜರು ಭೂಮಿ ಅಭಿವೃದ್ಧಿಯಂತಹ ಬೃಹತ್ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಆಶ್ವಾಸನೆ ನೀಡಿದ್ದು ಬರೀ ಆಶ್ವಾಸನೆಯಾಗಿಯೇ ಉಳಿಯಿತು. ರಾಜೀವರ ಆಡಳಿತದ ಕೊನೆಯ ವರ್ಷಗಳಲ್ಲಿ ಪರಿಸರ ನಾಶದ ಬೃಹತ್ ಯೋಜನೆಗಳಿಗೆ ಅನುಮತಿ ನೀಡಿ ಕಾಂಗ್ರೆಸ್ ಪಕ್ಷ ಪರಿಸರ ನಾಶಕ್ಕೆ ಬೆಂಬಲ ನೀಡುವ ತನ್ನ ನಿಜವಾದ ಬಣ್ಣ ಬಯಲು ಮಾಡಿತು. ಹಿಮಾಲಯದಲ್ಲಿ ಗಂಗಾ ನದಿಗೆ ಅಡ್ಡವಾಗಿ 'ತೆಹರಿ' ಅಣೆಕಟ್ಟು, ಮಧ್ಯಭಾರತದಲ್ಲಿ ನರ್ಮದಾ ನದಿಗೆ ಅಡ್ಡವಾಗಿ ಹಲವಾರು ಅಣೆಕಟ್ಟುಗಳ ನಿರ್ಮಾಣದಂತಹ ಅನೇಕ ಯೋಜನೆಗಳಿಗೆ ಅನುಮತಿ ನೀಡಿ ಈ ಯೋಜನೆಗಳಿಂದ ಪರಿಸರ ನಾಶವಾಗುವುದಕ್ಕೆ ಕಾರಣವಾಯಿತು.

ಪಕ್ಷಗಳ ಸ್ವಾರ್ಥ ಸಾಧನೆ ಈ ಬೃಹತ್ ಯೋಜನೆಗಳ ವಿರುದ್ಧ ಸ್ಥಳೀಯ ಜನರು, ಚಳುವಳಿಯನ್ನು ಮಾಡತೊಡಗಿದಾಗ ವಿರೋಧ ಪಕ್ಷಗಳು ಈ ಜನಪರ ಚಳುವಳಿಗಳನ್ನು ತಮ್ಮ ಸ್ವಾರ್ಥ ಸಾಧನೆಗೆ ಬಳಸಲು ಪ್ರಯತ್ನಿಸಿದವು ಒರಿಸ್ಸಾದ ಬಲಿಯಾಪಾಲದಲ್ಲಿ ಕ್ಷಿಪಣಿ ಉಡಾವಣೆ ಕೇಂದ್ರದ ವಿರುದ್ಧ ಪ್ರಬಲವಾದ ಚಳುವಳಿಯನ್ನು ಅಲ್ಲಿಯ ಜನ ಹಮ್ಮಿಕೊಂಡಾಗ ಆ ಕ್ಷೇತ್ರದ ಜನತಾ ದಳದ ಅಭ್ಯರ್ಥಿ ಈ ಕೇಂದ್ರದ ಕೆಲಸವನ್ನು ನಿಲ್ಲಿಸುವುದಾಗಿ ಭರವಸೆ ನೀಡಿ ಹಿಂದಿನ ಸಂಸತ್ತಿಗೆ ಆರಿಸಿ ಬಂದರು. ವಿರೋಧ ಪಕ್ಷಗಳ ನಾಯಕರಾದ ಬಿಜುಪಟ್ನಾಯಕ್ ಒರಿಸ್ಸಾದ ಮುಖ್ಯಮಂತ್ರಿಯಾದರೂ ಈ ಯೋಜನೆಯನ್ನು ನಿಲ್ಲಿಸಲು ಅಸಾಧ್ಯವಾಯಿತು. ಅಲ್ಲಿಯ ಜನರು ರಾಜಕೀಯ ಪಕ್ಷಗಳ ವಿಶ್ವಾಸಘಾತಕ ಕೃತ್ಯದಿಂದ ನಿರಾಶರಾಗಿ ಭ್ರಮನಿರಸನಗೊಂಡಿದ್ದಾರೆ.

ಬಿಜೆಪಿಯ ಪರಿಸರ ವಿರೋಧಿ ಮುಖ

ಮಧ್ಯಪ್ರದೇಶದಲ್ಲಿ, ವಿಸ್ತಾರವಾದ ಭೂಪ್ರದೇಶವನ್ನು ಮುಳುಗಡೆ ಮಾಡಿ ನರ್ಮದಾ ನದಿಗೆ ಕಟ್ಟಲಾಗುತ್ತಿರುವ ಅಣೆಕಟ್ಟನ್ನು ಅಲ್ಲಿಯ ಜನರು ವಿರೋಧಿಸಿ ನಡೆಸುತ್ತಿರುವ ವ್ಯಾಪಕ ಚಳುವಳಿಯಲ್ಲಿ ತೂರಿಕೊಂಡ ಬಿಜೆಪಿ, ಅಣೆಕಟ್ಟಿನ ನಿರ್ಮಾಣ ನಿಲ್ಲಿಸುವ ಭರವಸೆ ನೀಡಿ ಸಂಸತ್ತು ಮತ್ತು ವಿಧಾನ ಸಭೆಯ ಹಲವಾರು ಕ್ಷೇತ್ರಗಳನ್ನು ಗೆದ್ದಿತಷ್ಟೆ, ಆದರೆ ಅನಂತರ ತನ್ನ ಆಶ್ವಾಸನೆಯನ್ನು ಗಾಳಿಗೆ ತೂರಿ, ನರ್ಮದಾ ಯೋಜನೆಗೆ ಬೆಂಬಲ ನೀಡಿತು, ಖ್ಯಾತ ಪರಿಸರವಾದಿ ಬಾಬಾ ಆಮ್ಟೆಯವರೂ ಸೇರಿದಂತೆ, ಶಾಂತಿಯುತ ಚಳುವಳಿಗಾರರ ಮೇಲೆ

(ಆನೇ ಪುಟಕ್ಕೆ)

'ಮುಂಜಾವು' ೯-೬-೯೧ರ ಸಂಚಿಕೆಯಲ್ಲಿ, "ದೇಶದ ನೈಜ ಸ್ವಾತಂತ್ರ್ಯ ಮತ್ತು ಜನತೆಯ ಪ್ರಜಾಪ್ರಭುತ್ವ ಹಾಗೂ ಪ್ರಸಕ್ತ ಚುನಾವಣೆಗಳು" ಎಂಬ ಸಂಪಾದಕೀಯ ಲೇಖನಕ್ಕೆ ಕೆಲವು ಪ್ರತಿಕ್ರಿಯೆಗಳು ಬಂದಿವೆ.

"ಯೋಚಿಸಿ ಮತ ನೀಡಿ", "ಪೊಳ್ಳು ಭರವಸೆ, ಆಮಿಷಗಳಿಗೆ ಬಲಿಯಾಗದೆ, ದಕ್ಷ ಮತ್ತು ಪ್ರಾಮಾಣಿಕರನ್ನೇ ಆಯ್ಕೆ ಮಾಡಿ" ಮುಂತಾಗಿ ಚುನಾವಣೆಯ ಹೊತ್ತಿಗೆ ಎಲ್ಲೆಲ್ಲೂ ಕರೆ ಕೇಳಿ ಬರುತ್ತದೆ ಆದರೆ, ಭಾರತದಲ್ಲಿ (ಮತ್ತು ಇಂಥ ಎಲ್ಲ 'ಪ್ರಜಾಪ್ರಭುತ್ವ'ವೆಂದು ಕರೆಸಿಕೊಳ್ಳುವ ದೇಶಗಳಲ್ಲಿ) ನಿಜವಾದ ಪ್ರಭುಗಳು ಪ್ರಜೆಗಳೇ ಹೌದೇ ? ಅಥವಾ ಆಧುನಿಕ ಸಾಮ್ರಾಜ್ಯಶಾಹಿ (neo-imperialists) ಗಳಾಗಿರುವ ಬಹು ರಾಷ್ಟ್ರೀಯ ಬಂಡವಾಳ ಶಾಹಿ (multinational capitalists)ಗಳಿಗೆ ಅಡಿಯಾಳುಗಳಾದ ಆಯಾ ದೇಶದ ದೊಡ್ಡ ಬಂಡವಾಳಗಾರ–ದೊಡ್ಡ ಭೂಮಾಲೀಕ ವರ್ಗಗಳೇ ಪ್ರಜೆಗಳ ಹೆಸರಲ್ಲಿ ಪ್ರಭುತ್ವ ನಡೆಸುತ್ತಿರುವುದೋ ?

ಈ ಸ್ಥಾಪಿತ ವರ್ಗ ಹಿತಾಸಕ್ತಿಗಳ ಇಚ್ಛೆಯಂತೆ ನಡೆಯುವ 'ಸರ್ಕಾರ'ವೆಂಬ ವ್ಯವಸ್ಥೆಯಲ್ಲಿ, ಹಾಲಿ ಯಾವುದೇ ರಾಜಕೀಯ ಪಕ್ಷವೂ ಈ ವರ್ಗಗಳ ಹಿತಾಸಕ್ತಿಗೆ ವಿರುದ್ಧ ಪ್ರಜೆಗಳ ಯೋಗಕ್ಷೇಮ ನೋಡಿಕೊಳ್ಳುವುದು ಹೇಗೆ ಸಾಧ್ಯವಿಲ್ಲ; ಆದ್ದರಿಂದಾಗಿ ಹೇಗೆ ಇನ್ನೊಂದು ಸ್ವಾತಂತ್ರ್ಯ ಸಂಗ್ರಾಮವೇ ನಡೆದು ಪ್ರಜೆಗಳ ನಿಜವಾದ ಪ್ರಭುತ್ವ ಸ್ಥಾಪನೆಯಾಗಬೇಕಿದೆ;

—ಮುಂತಾದ ವಿಚಾರಗಳನ್ನು ಆ ಲೇಖನದಲ್ಲಿ ಚರ್ಚಿಸಲಾಗಿತ್ತು.

ಈ ಚರ್ಚೆಯನ್ನು ನಮ್ಮ ೧೪-೭-೯೧ರ ಸಂಚಿಕೆಯಲ್ಲಿ ಮುಕ್ತಾಯಗೊಳಿಸುವ ಉದ್ದೇಶವಿದೆ. ಆದ್ದರಿಂದ ಓದುಗರು ತಮ್ಮ ಅಭಿಪ್ರಾಯ–ಪ್ರತಿಕ್ರಿಯೆ ಮುಂತಾದುವನ್ನು (ಇಲ್ಲಿ ಪ್ರಕಟವಾಗುವ ಓದುಗರ ಅಭಿಪ್ರಾಯಗಳಿಗೂ ಪ್ರತಿಕ್ರಿಯಿಸಬಹುದು) ೭-೮-೯೧ರೊಳಗೆ ನಮಗೆ ತಲುಪುವಂತೆ ಕಳಿಸಲು ಕೋರಿದೆ. —ಸಂ.

ಮಹಿಳೆಯರ ಪ್ರತಿಭಟನೆಗೂ 'ಮುಂಜಾವಿ'ಗೂ ಮೆಚ್ಚಿಗೆ

ಪ್ರಿಯರೆ,

ಗೋಡೆಗಳ ತುಂಬಾ ಕಪ್ಪು ಫಲಕಗಳ ವೇದವಾಕ್ಯಗಳು ತುಂಬಿರುವ ಕೊಪ್ಪ ಕಿರಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಉತ್ತೀರ್ಣ ಮಾಡಲು ಲಂಚಕ್ಕೆ ಆಸೆಪಟ್ಟ ಹಾಗೂ ಕೆಲವು ಮುಗ್ಧ ವಿದ್ಯಾರ್ಥಿನಿಯರನ್ನು 'ಕೆಟ್ಟದಾಗಿ' ನಡೆಸಿಕೊಂಡ ಕಾಲೇಜಿನ ಪ್ರಿನ್ಸಿಪಾಲ್ ಹಾಗೂ ಸಹಕರಿಸಿದ ಇವರ ಚಮಚಗಳಿಗೆ ಕೊಪ್ಪ ಮಹಿಳಾ ಸಮಾಜದವರು ಪ್ರತಿಭಟಿಸಿ ತೋರಿದ ಸಾಹಸ, ಧೈರ್ಯ, ಮೆಚ್ಚುವಂಥದ್ದು.

ಇನ್ನು ಮುಂದೆ ಇಂತಹ ನೀಚ ಪ್ರವೃತ್ತಿ ನಡೆಯದಂತೆ ತಡೆಗಟ್ಟಲು ನೆರವಾದ 'ಮುಂಜಾವು' ಪತ್ರಿಕೆಗೂ ನಮ್ಮ ಧನ್ಯವಾದಗಳು.

—ಬಾಬು ಕುಂಡ, ಮಂಡಲ ಸದಸ್ಯರು, ನರಸೀಪುರ ಮಂಡಲ ಪಂಚಾಯ್ತಿ.

ಸಾರ್ವಜನಿಕ ಹಿತರಕ್ಷಣಾ ಸಮಿತಿ ಹಮ್ಮಿಕೊಂಡಿದ್ದ ಧರಣಿ ರದ್ದು

ಕೊಪ್ಪ : ಕಿರಿಯ ಕಾಲೇಜಿನ ಹಗರಣಗಳ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆ ತನಿಖೆ ಆರಂಭಿಸಿ ಈಗಾಗಲೇ ಕೆಲವು ತುರ್ತು ಕ್ರಮಗಳನ್ನು ಕೈಗೊಂಡಿರುವುದರಿಂದ, ಸಾರ್ವಜನಿಕ ಹಿತರಕ್ಷಣಾ ಹೋರಾಟ ಸಮಿತಿ ಜುಲೈ ೧ನೇ ತಾರೀಖು ಸೋಮವಾರದಿಂದ ನಡೆಸಲು ಉದ್ದೇಶಿಸಿದ್ದ ಧರಣಿಯನ್ನು ಕೈ ಬಿಟ್ಟಿದೆ.

ರಾಮಕೃಷ್ಣಯ್ಯ ಅವರನ್ನು ಇಲ್ಲಿಂದ ವರ್ಗಾವಣೆ ಮಾಡಿಸಬಾರದೆಂದೂ, ಅತನ ಬಗ್ಗೆ ತನಿಖೆಯಾಗಿ ಶಿಕ್ಷೆಯಾಗಲೇಬೇಕೆಂದೂ ಸಮಿತಿ ಅಧ್ಯಕ್ಷರಾದ ವಕೀಲ ಎ. ಟಿ. ಕಂಠಿ ಅವರು ಒತ್ತಾಯಿಸಿದ್ದಾರೆ.

ಆಕಾಶವಾಣಿಯಲ್ಲಿ ಕೊಪ್ಪದ ಮಕ್ಕಳ ಕಾರ್ಯಕ್ರಮ

ಕೊಪ್ಪ : ಭದ್ರಾವತಿ ಆಕಾಶವಾಣಿ ಕೇಂದ್ರದಿಂದ ದಿನಾಂಕ ೧೪-೭-೯೧ನೇ ಭಾನುವಾರ ಬೆಳಗ್ಗೆ ೯-೧೫ಕ್ಕೆ 'ಚಿಣ್ಣರ ಬಳಗ' ಕಾರ್ಯಕ್ರಮದಲ್ಲಿ ಇಲ್ಲಿನ ಎ. ಎಲ್.ಎಸ್. ರಾವ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ ಬಿತ್ತರಗೊಳ್ಳುವುದೆಂದು ಮುಖ್ಯೋಪಾಧ್ಯಾಯಿನಿ ತಿಳಿಸಿದ್ದಾರೆ.

ಕೆಸವೆ ಸಾ ಸಂಘ ಅಧ್ಯಕ್ಷ ಮಾಧವರಾವ್ ಮುಂದುವರಿಕೆ : ಆಯ್ಕೆ ಅನೂರ್ಜಿತಾಜ್ಞೆಗೆ ಹೈಕೋರ್ಟ್ ತಡೆ

ಕೆಸವೆ : ಇಲ್ಲಿನ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ೫-೪-೯೧ ರಂದು ಅಧ್ಯಕ್ಷ ಚುನಾವಣೆ ನಡೆದು ಕೆ. ಆರ್. ಮಾಧವರಾವ್ ಆಯ್ಕೆಯಾದ ಸಭಾ ನಡವಳಿಕೆಯನ್ನು ಅನೂರ್ಜಿತಗೊಳಿಸಿದ್ದ ಚಿಕ್ಕಮಗಳೂರು ಸಹಕಾರ ಇಲಾಖೆ ಸಹಾಯಕ ನಿಬಂಧಕರ ೧೫-೪-೯೧ರ ಆದೇಶಕ್ಕೆ ರಾಜ್ಯ ಹೈಕೋರ್ಟ್ ೨೮-೫-೯೧ ರಂದು ತಡೆಯಾಜ್ಞೆ ನೀಡಿದ್ದು, ಇದರನ್ವಯ ಕೆ. ಆರ್. ಮಾಧವರಾವ್ ಅವರೇ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ.

ಈ ಮಧ್ಯೆ, ಆಡಳಿತ ಮಂಡಳಿ ನಿರ್ದೇಶಕರಾಗಿ ಆಯ್ಕೆಯಾಗಿದ್ದ ಎಚ್. ಪಿ. ರಾಮಪ್ಪ ಅವರ ಸಹೋದರ-ಇದೇ ಸೊಸೈಟಿಯಲ್ಲಿ ನೌಕರನಾಗಿರುವ ಹಿನ್ನೆಲೆಯಲ್ಲಿ, ರಾಮಪ್ಪ ಅವರ ಆಡಳಿತ ಮಂಡಳಿ ನಿರ್ದೇಶಕತ್ವವನ್ನು ೧೦-೬-೯೧ರ ಆಜ್ಞೆಯ ಮೂಲಕ ಸಹಾಯಕ ನಿಬಂಧಕರು ರದ್ದು ಮಾಡಿ, ಅವರು ಒಂದು ವರ್ಷ ಕಾಲ ಯಾವುದೇ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಗೆ ಸ್ಪರ್ಧಿಸದಂತೆ ಅನರ್ಹಗೊಳಿಸಿದ್ದಾರೆಂದು ತಿಳಿದುಬಂದಿದೆ.

ಪಾಲಿಟೆಕ್ನಿಕ್ ಪ್ರವೇಶಾವಕಾಶ

ತೀರ್ಥಹಳ್ಳಿ : ೧೯೯೧-೯೨ನೇ ಸಾಲಿನ ಮೊದಲನೇ ಡಿಪ್ಲೊಮಾ ಸಿವಿಲ್, ಎಲೆಕ್ಟ್ರಿಕಲ್ ಮತ್ತು ಮೆಕಾನಿಕಲ್ ತರಗತಿಗಳಿಗೆ ಪ್ರವೇಶಕ್ಕೆ ಅವಕಾಶವಿದೆ. ಅರ್ಜಿಗಳನ್ನು ೨೫ ರೂ. ಶುಲ್ಕ ನೀಡಿ ಪಾಲಿಟೆಕ್ನಿಕ್ ಕಛೇರಿಯಲ್ಲಿ ಅಥವಾ ೩೦ರೂ. ಎಂ. ಒ. ಮಾಡಿ ಅಂಚೆ ಮೂಲಕ ಪಡೆಯಬಹುದು ಹೆಚ್ಚಿನ ವಿವರಗಳನ್ನು ಸಹ್ಯಾದ್ರಿ ಪಾಲಿಟೆಕ್ನಿಕ್ ಕಛೇರಿ, ವನಶ್ರೀ ಬಿಲ್ಡಿಂಗ್, ಕೊಪ್ಪ ರಸ್ತೆ, ತೀರ್ಥಹಳ್ಳಿ, ಇಲ್ಲಿ ಪಡೆಯಬಹುದು ಪಿ. ಯು. ಸಿ. ಮತ್ತು ಪದವಿ ಆದವರಿಗೂ ಸಹ ಎಸ್.ಎಸ್.ಎಲ್.ಸಿ. ಅಂಕಗಳ ಆಧಾರದ ಮೇಲೆ ಪ್ರವೇಶಾವಕಾಶವಿದೆ.

ಎಲ್ಲ ಪಕ್ಷಗಳೂ ಪರಿಸರ ನಾಶದಲ್ಲಿ ಶಾಮೀಲಾಗಿವೆ ಏಕೆ ?

(೩ನೇ ಪುಟದಿಂದ)

ಲಾಠಿ ಪ್ರಹಾರ ಹಾಗೂ ಅಶ್ವಾರೋಹಿ ಪೋಲೀಸರಿಂದ ಆವೈಯವರನ್ನೂ ತುಳಿಸಿ ಥಳಿಸಿದ್ದು ಈ ಬಿಜೆಪಿ ಸರ್ಕಾರವೇ ಎಂದರೆ ಅದರ ನಿಜ ಬಣ್ಣ ಗೊತ್ತಾಗುತ್ತದೆ !

ಇದೇ ರಾಜ್ಯದ ಬಸ್ತಾರ್ ಜಿಲ್ಲೆಯಲ್ಲಿ ಸಾವಿರಾರು ಎಕರೆ ವ್ಯಾಪಕ ಅರಣ್ಯ ನಾಶ ಮಾಡುತ್ತಿರುವ ಅರಣ್ಯ ಕಂಟ್ರಾಕ್ಟರುಗಳೆಲ್ಲ ಬಿಜೆಪಿ ಬೆಂಬಲಿಗರೇ ; ಅವರಿಗೀಗ ಬಿಜೆಪಿ ಸರ್ಕಾರದಿಂದ ಮುಕ್ತ ಅವಕಾಶ ! ಒಂದು ಅಧಿಕೃತ ಅಧ್ಯಯನದ ಪ್ರಕಾರ ಈ ಬಸ್ತಾರ್ ಜಿಲ್ಲೆಯಿಂದ ಒಂದು ತಿಂಗಳಲ್ಲಿ ೧೦ ಕೋಟಿ ರೂ.ಗಳಷ್ಟು ಬೆಲೆಯ ಮರಮಟ್ಟು ಹೊರ ರಾಜ್ಯಗಳಿಗೆ ಕಳ್ಳಸಾಗಣೆಯಾಗುತ್ತಿದೆ. "ಸಾಮಾಜಿಕ ನ್ಯಾಯ"ದ ಬೊಬ್ಬೆ ಹೊಡೆಯುತ್ತಿರುವ ಬಿಜೆಪಿಯ 'ನ್ಯಾಯ' ಇದು !

ಬಿರ್ಲಾ ಪ್ರೇಮಿ ಕಮ್ಯುನಿಸ್ಟ್ ಪಾರ್ಟಿಗಳು !

ಕೇರಳದಲ್ಲಿ ಕಮ್ಯುನಿಸ್ಟ್ ಸರ್ಕಾರ ಆಡಳಿತಕ್ಕೆ ಬಂದಾಗ ಬಿರ್ಲಾ ಕಂಪೆನಿಗೆ ಪಾಲಿಫೈಬರ್ ಕಾರ್ಖಾನೆ ಸ್ಥಾಪಿಸಲು ಅನುಮತಿ ನೀಡಿತು. ಈ ಕಾರ್ಖಾನೆಗೆ ಕಚ್ಚಾ ಮಾಲು ಪೂರೈಸಲು ಸಾವಿರಾರು ಎಕರೆ ನೈಸರ್ಗಿಕ ಕಾಡನ್ನು ಕಡಿದು ನೀಲಗಿರಿ ನೆಡುವ ಯೋಜನೆಗೆ ಅನುಮತಿ ನೀಡಿತು. ಇದರಿಂದ ಗುಡ್ಡಗಾಡಿನಲ್ಲಿ ವಾಸಿಸುವ ೨ ಲಕ್ಷ ಜನರು ಹೊಟ್ಟೆಗೆ ಹಿಟ್ಟಿಲ್ಲದೆ ಸಾಯುವ ಪರಿಸ್ಥಿತಿ ಉಂಟಾಯಿತು. ಎಡಪಂಥದ ವಿಚಾರಧಾರೆಯಿರುವ ಕೇರಳದ ಸರ್ಕಾರವು ನೈಸರ್ಗಿಕ ಸಂಪತ್ತಿನ ಹಕ್ಕನ್ನು ದೊಡ್ಡ ದೊಡ್ಡ ಉದ್ದಿಮೆಪತಿಗಳಿಗೆ ಸುಲಭವಾಗಿ ನೀಡಿ ತನ್ನ ಪರಿಸರ ವಿರೋಧಿ ಜನವಿರೋಧಿ ನೀತಿಯನ್ನು ತೋರ್ಪಡಿಸಿಕೊಂಡಿದೆ ಅಷ್ಟೇ ಅಲ್ಲ, ಅಣು ವಿದ್ಯುತ್ ಸ್ಥಾವರಗಳನ್ನ ಕಮ್ಯುನಿಸ್ಟ್ ಪಕ್ಷಗಳು ಕಣ್ಣು ಮುಚ್ಚಿ ಬೆಂಬಲಿಸುತ್ತಿವೆ.

ಈ ಎಲ್ಲಾ ಪಕ್ಷಗಳು ಪರಿಸರ ವಿರೋಧಿಯಾಗಲು ಕಾರಣ

ಈ ಮೇಲಿನ ಘಟನೆಗಳು ಒಂದೊಂದು ಉದಾಹರಣೆ ಮಾತ್ರ ಈ ಎಲ್ಲಾ ವಿಷಯಗಳನ್ನು ವಸ್ತುನಿಷ್ಠವಾಗಿ ಅಭ್ಯಸಿಸಿದಾಗ ನಮ್ಮ ದೇಶದಲ್ಲಿನ ರಾಜಕೀಯ ಪಕ್ಷಗಳ ಪರಿಸರ ವಿರೋಧಿ ಜನವಿರೋಧಿ ನೀತಿಗಳು ಸ್ಪಷ್ಟವಾಗಿ ತಿಳಿಯುತ್ತವೆ. ಕಾಂಗ್ರೆಸ್ ಪಕ್ಷವಿರಲಿ, ಬಿಜೆಪಿಯಿರಲಿ, ಜನತಾ ದಳ ಅಥವಾ ಕಮ್ಯುನಿಸ್ಟ್ ಪಕ್ಷವಾಗಲಿ ಇವುಗಳೆಲ್ಲಾ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಾಗೂ ಅಧಿಕಾರದ ಆಸೆಗಾಗಿ ತಮ್ಮ 'ವಿಚಾರಧಾರೆ'ಗಳನ್ನೆಲ್ಲಾ ಗಾಳಿಗೆ ತೂರಿ ನೈಸರ್ಗಿಕ ಸಂಪತ್ತಿನ ಲೂಟಿಯನ್ನು ನಿರಂತರ ಮಾಡಿಕೊಂಡು ಹಣ ಗಳಿಕೆಯಲ್ಲಿ ತೊಡಗಿವೆ.

ಸಾಕಿದ ನಾಯಿಗಳು

ಈ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳಿಗೆ ಚುನಾವಣೆಗೆ ಹಣ ನೀಡುವವರು ಯಾರು? ಉದಾ: ಬೃಹತ್ ಅಣೆಕಟ್ಟುಗಳ ನಿರ್ಮಾಣದಿಂದ ಅಪಾರ ಹಣ ಗಳಿಸುವ ಗುತ್ತಿಗೆದಾರರ ಲಾಬಿ ಎಲ್ಲಾ ರಾಜಕೀಯ ಪಕ್ಷಗಳಿಗೆ ವಂತಿಗೆ ನೀಡಿ ತನ್ನ ಹಿತವನ್ನು ರಕ್ಷಿಸಿಕೊಳ್ಳುತ್ತದೆ. ಚುನಾವಣೆಯಲ್ಲಿ ಯಾವುದೇ ಪಕ್ಷದ ಅಭ್ಯರ್ಥಿ ಆರಿಸಿ ಬಂದರೂ ಕೂಡ, ಸಾಕಿದ ನಾಯಿಗಳು ಯಜಮಾನನ ಕಾಲು ನೆಕ್ಕುವಂತೆ ಈ ಎಲ್ಲ ಪಕ್ಷಗಳು ಶ್ರೀಮಂತರ ಏಜೆಂಟರಾಗಿಯೇ ಕಾರ್ಯ ನಿರ್ವಹಿಸುತ್ತವೆ ವಿನಃ, ಜನಪರ ಕೆಲಸ ಅವಕ್ಕೆ ಸಾಧ್ಯವಾಗುವುದಿಲ್ಲ.

ವಿರಾಂಚಿ ಮರೆಯಾದ ಮನೇಕಾ

ಸರ್ಕಾರಿ ಅಧಿಕಾರಿಗಳಲ್ಲಿ ಹಾಗೂ ಮಂತ್ರಿಗಳಲ್ಲೂ ಪ್ರಾಮಾಣಿಕರೂ, ದಕ್ಷರೂ ಆದ ಸಾಂಗ್ಲಿಯಾನ, ಕಿರಣ್ ಬೇಡಿಯವರಂತಹ ಅಧಿಕಾರಿಗಳು, ಮನೇಕಾ ಗಾಂಧಿಯವರಂತಹ ಮಂತ್ರಿಗಳು ಅಲ್ಲಲ್ಲಿ ಹಲವರಿದ್ದರೂ ಮೇಲೆ ಹೇಳಿದಂಥ ವಿವಿಧ ಪಟ್ಟಭದ್ರ ಲಾಬಿಗಳು ಅವರನ್ನು ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ.

ಉದ್ದಿಮೆಪತಿಗಳು ಚುನಾವಣೆಯಲ್ಲಿ ಮತ್ತು ಇತರ ಸಮಯದಲ್ಲಿ ಈ ಎಲ್ಲಾ ಪಕ್ಷಗಳಿಗೆ ಹಣ ನೀಡುವುದರಿಂದ ಕರ್ನಾಟಕದಲ್ಲಿ ನಡೆದಂತೆ ಬಡ ಜನರು ಬಳಸುವ ಗೋಮಾಳದಲ್ಲಿ ನೀಲಗಿರಿ ಬೆಳೆಸಲು ಅವಕಾಶ ಸಿಗುತ್ತದೆ. ನಮ್ಮ ದೇಶದ ನೈಸರ್ಗಿಕ ಸಂಪನ್ಮೂಲಗಳಾದ ಅರಣ್ಯ, ಭೂಮಿ, ನೀರು, ಖನಿಜಗಳನ್ನೆಲ್ಲ ಈ ಎಲ್ಲಾ ರಾಜಕೀಯ ಪಕ್ಷಗಳೂ ಸಹ ಸ್ಥಾಪಿತ ಹಿತಾಸಕ್ತಿಗಳಿಗೆ ಒತ್ತೆಯಿಟ್ಟು, ಅತೀ ಸುಲಭವಾಗಿ ಹಣ ಗಳಿಕೆಯ ಮಾಧ್ಯಮವನಾಗಿಸಿಕೊಂಡಿವೆ.

ನಿಜಸ್ಥಿತಿಯು ಹೀಗಿರುವಾಗ ದೇಶದ ಅನೇಕ ಸಮಸ್ಯೆಗಳ ಜೊತೆಗೆ ಈ ರಾಜಕೀಯ ಪಕ್ಷಗಳಿಂದ ಪರಿಸರ ಸಂರಕ್ಷಣೆ ನಿರೀಕ್ಷಿಸುವುದು ದೊಡ್ಡ ಅಪರಾಧವೆಂದರೂ ತಪ್ಪಿಲ್ಲ.

—ವಸಂತ್ ಕುಮಾರ್ ಹರ್ಡೀಕರ್, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ